ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 07–10–2017

## ಪತ್ರಿಕಾ ಆಮಂತ್ರಣ

1. ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಲೋಕಾರ್ಪಣೆ ಸಮಾರಂಭ:

ಉದ್ಘಾಟನೆ:
ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಅಧ್ಯಕ್ಷತೆ:
ಹೆಚ್. ಆಂಜನೇಯ, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ದಿನಾಂಕ: 8–10–2017 ಭಾನುವಾರ, ಸಮಯ: ಮಧ್ಯಾಹ್ನ 12–00 ಗಂಟೆಗೆ.
ಸ್ಥಳ: ಡಾ. ಪ್ರಭಾಕರ್ ಕೋರೆ ಕನ್‌ವೆನ್ಷನ್ ಸೆಂಟರ್, ತುಮಕೂರು ರಸ್ತೆ, ಯಶವಂತಪುರ, ಬೆಂಗಳೂರು – 560 058.

# ಪತ್ರಿಕಾ ಪ್ರಕಟಣೆ

**ಸಂಖ್ಯೆ:157/277**

## "ಸಾರ್ವತ್ರಿಕ ಆರೋಗ್ಯ ಸೇವೆ" ಯೋಜನೆ ಪ್ರಾರಂಭ

**ಬೆಂಗಳೂರು, ಅಕ್ಟೋಬರ್ 04 ( ಕರ್ನಾಟಕ ವಾರ್ತೆ) :**

"ಸಾರ್ವತ್ರಿಕ ಆರೋಗ್ಯ ಸೇವೆ" ಯೋಜನೆಯು ಒಂದು ಅಪೂರ್ವ ಯೋಜನೆಯಾಗಿದ್ದು ಇಡೀ ರಾಜ್ಯದ ಎಲ್ಲಾ ಜನತೆಗೂ ಆರೋಗ್ಯ ಸೇವೆ ದೊರೆಯಲಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಕೆ.ಆರ್. ರಮೇಶ್ ಕುಮಾರ್ ಅವರು ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು ಪ್ರಸ್ತುತ ಇರುವ ಪದ್ಧತಿಯಲ್ಲಿ ಕೆಲವು ವಿಭಾಗದ ಫಲಾನುಭವಿಗಳಿಗೆ ಪ್ರತ್ಯೇಕವಾಗಿ ನಿಗದಿಪಡಿಸಿರುವ ಯೋಜನೆ ಅಡಿಯಲ್ಲಿ ಸೇವೆಗಳು ದೊರೆಯುತ್ತಿವೆ. ಪ್ರಸ್ತುತ ಯಾವುದೇ ಯೋಜನೆ ಅಡಿಯಲ್ಲಿ ಸೇವೆ ವಂಚಿತ ಜನತೆ, ವೈದ್ಯಕೀಯ ಸೇವೆಯ ನೆರವಿಗಾಗಿ ಸಾಕಷ್ಟು ಕೋರಿಕೆ ಹಾಗೂ ಬೇಡಿಕೆಗಳನ್ನು ನಮ್ಮಿಂದ ಬಯಸುತ್ತಿದ್ದಾರೆ. ಆದುದರಿಂದ "ಸಾರ್ವತ್ರಿಕ ಆರೋಗ್ಯ ಸೇವೆ" ಯೋಜನೆಯನ್ನು ಪ್ರಾರಂಭಿಸಲಾಗುತ್ತಿದೆ.

ರಾಜ್ಯದ ಇಡೀ ಜನಸಂಖ್ಯೆ ಸುಮಾರು 6.5 ಕೋಟಿಯಷ್ಟಿದ್ದು, ಶೇಕಡ 94% ರಷ್ಟು ಜನಸಂಖ್ಯೆಯನ್ನು "ಆಧಾರ್" ಗೆ ಹೊಂದಿಸಲಾಗಿದೆ. ಸಾರ್ವತ್ರಿಕ ಆರೋಗ್ಯ ಸೇವೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು "ಕಾರ್ಡು" ಗಳು ಅತ್ಯವಶ್ಯಕವಾಗಿವೆ. ಕಾರ್ಡುಗಳು ಇಲ್ಲದಿದ್ದರೆ ಫಲಾನುಭವಿಗಳು ಯೋಜನೆಯ ಸವಲತ್ತುಗಳನ್ನು ಪಡೆಯಲು ಅರ್ಹರಾಗಿರುವುದಿಲ್ಲ.

ಸುಮಾರು 32 ಸಾವಿರ ಆಶಾ ಕಾರ್ಯಕರ್ತೆಯರ ಸೇವೆಯನ್ನು ಟ್ಯಾಬ್ ಒದಗಿಸುವ ಮೂಲಕ ಅಂಕಿ ಅಂಶಗಳ ನಿರ್ವಹಣೆಗಾಗಿ ಬಳಿಸಿಕೊಳ್ಳಲು ಸರ್ಕಾರದ ಉದ್ದೇಶವಾಗಿತ್ತು.

ಟ್ಯಾಬ್‌ಗಳನ್ನು ಒದಗಿಸುವ ಪ್ರಕ್ರಿಯೆಯನ್ನು ಶೀಘ್ರವಾಗಿ ಮುಗಿಸಲು ಮತ್ತು ಟ್ಯಾಬ್‌ಗಳ ಖರೀದಿ ದುಬಾರಿಯಾಗಿರುವುದರಿಂದ ಟ್ಯಾಬ್‌ಗಳನ್ನು ಹೆಸರಾಂತ ಕಂಪನಿಗಳಿಂದ ಬಾಡಿಗೆಗೆ ಪಡೆದು ಆಶಾ ಕಾರ್ಯಕರ್ತೆಯರಿಗೆ ನೀಡಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿತ್ತು.

ಎಲ್ಲಾ ನಾಗರೀಕರಿಗೂ ಸಾರ್ವತ್ರಿಕ ಆರೋಗ್ಯ ಸೇವೆಯನ್ನು ತ್ವರಿತವಾಗಿ ಒದಗಿಸಲು ಪ್ರಯತ್ನಿಸಲಾಗುತ್ತಿದೆ. ಸಾರ್ವತ್ರಿಕ ಆರೋಗ್ಯ ಸೇವಾ ಯೋಜನೆಯು ಅಪೂರ್ವ ಕಾರ್ಯಕ್ರಮವಾಗಿದ್ದು ಇಡೀ ದೇಶದಲ್ಲಿಯೇ ಪ್ರಪ್ರಥಮವಾಗಿದೆ. ಇಂತಹ ಸಂದರ್ಭದಲ್ಲಿ ಪೂರೈಕೆದಾರರು ಮತ್ತು ವ್ಯಾಪಾರೀಕರು ಈ ಪ್ರಕ್ರಿಯೆಯ ಅವಿಭಾಜ್ಯ ಅಂಗವಾಗಿದ್ದಾರೆ. ಈ ಕಾರಣಗಳಿಂದ ನಿರಾಸಗೊಂಡ ವ್ಯಾಪಾರಿಗಳು ವಿಶಾಲ ಹೃದಯವಿಲ್ಲದೆ ಪ್ರಸ್ತಾವನೆಯನ್ನು ಪ್ರಶಂಶಿಸಿರುವುದಿಲ್ಲ. ಅಲ್ಲದೆ ಕಾರ್ಯಕ್ರಮ ಅನುಷ್ಠಾನಗೊಳಿಸುವಿಕೆಯಲ್ಲಿ ತಪ್ಪುಗಳನ್ನು ಹುಡುಕಲು ಪ್ರಯತ್ನಿಸುತ್ತಿದ್ದಾರೆ.

ಮಾನ್ಯ ಮುಖ್ಯಮಂತ್ರಿಗಳು ಆರೋಗ್ಯ ಸಚಿವರ ಗಮನಕ್ಕೆ ತರದೆ ಪ್ರಸ್ತಾವನೆಯ ಬಗ್ಗೆ ನಿರ್ಣಯ ತೆಗೆದುಕೊಂಡಿದ್ದಾರೆ ಎಂಬುದು ಸತ್ಯಕ್ಕೆ ದೂರವಾಗಿರುತ್ತದೆ. ಈ ರೀತಿ ಯಾವತ್ತೂ ಆಗಿಲ್ಲ ಹಾಗೂ ಇಲಾಖೆಯಲ್ಲಿ ಕಾರ್ಯನಿರ್ವಹಿಸಲು ಆರೋಗ್ಯ ಸಚಿವರು ಕಾನೂನಿನ ಪರಿಮಿತಿಯಲ್ಲಿ ಸಂಪೂರ್ಣ ನ್ಯಾಯಯುತವಾಗಿ ಕೆಲಸ ನಿರ್ವಹಿಸುತ್ತಿದ್ದು ಯಾವುದೇ ಆಡಳಿತಾತ್ಮಕ ವಿಷಯದಲ್ಲಿ ಹಸ್ತಕ್ಷೇಪ ಮಾಡುತ್ತಿಲ್ಲ.

ಈಗ ಪ್ರಾರಂಬಿಸಿರುವ ಪ್ರಕ್ರಿಯೆಯಲ್ಲಿ ಗಂಭೀರ ಲೋಪದೋಷಗಳು ಇದ್ದಲ್ಲಿ, ಸಾರ್ವಜನಿಕ ಹಿತಾಸಕ್ತಿ ಒಳಗೊಂಡಿದ್ದರೆ ನಾನು ಅದನ್ನು ಸರಿಪಡಿಸಿಕೊಳ್ಳಲು ಸದಾ ತೆರೆದ ಮನಸ್ಸಿನಿಂದ ಸಿದ್ಧನಿರುತ್ತೇನೆ. ರಾಜ್ಯ ಸರ್ಕಾರವು ಪ್ರಾಮಾಣಿಕವಾಗಿ ಮಾಡುತ್ತಿರುವ ಕೆಲಸಕ್ಕೆ ಸಂಕುಚಿತ ಮನೋಭಾವವನ್ನು ತೊರೆದು ನಾವು ಕೈಗೊಂಡಿರುವ ಪ್ರಾಮಾಣಿಕ ಕೆಲಸಕ್ಕೆ ಸಹಕಾರ ನೀಡಬೇಕೆಂದು ಆರೋಗ್ಯ ಸಚಿವರು ಮನವಿ ಮಾಡಿದ್ದಾರೆ.

**ಸಂಖ್ಯೆ:158/278**

## ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಂಡ ರಾಜ್ಯದ ನಾಲ್ವರು ರೈತರಿಗೆ ಡಾ|| ಜಿ.ಕೆ. ವೀರೇಶ್ ದತ್ತಿನಿಧಿ ಪ್ರಶಸ್ತಿ ಪ್ರದಾನ

**ಬೆಂಗಳೂರು, ಅಕ್ಟೋಬರ್ 07 (ಕರ್ನಾಟಕ ವಾರ್ತೆ) :**

ಅಲುಮ್ನಿ ಅಸೋಸಿಯೇಷನ್ – ಕೃಷಿ ವಿಶ್ವಿದ್ಯಾನಿಲಯದ ವತಿಯಿಂದ ಡಾ|| ಜಿ. ಕೆ. ವೀರೇಶ್ ದತ್ತಿನಿಧಿ ಅಂಗವಾಗಿ, ಹೆಬ್ಬಾಳ ಕೃಷಿವಿಶ್ವವಿದ್ಯಾನಿಲಯದಲ್ಲಿ ಇಂದು ಏರ್ಪಡಿಸಿದ್ದ ಸಮಗ್ರ ಕೃಷಿ ಪದ್ಧತಿ ರೈತ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೆಚ್. ಸದಾನಂದ, ರಾಯಚೂರು ಜಿಲ್ಲೆಯ ರಾಮಕೃಷ್ಣ ಶವಟ್ಟಿ, ಶಿವಮೊಗ್ಗ ಜಿಲ್ಲೆಯ ದುರ್ಗಪ್ಪ ಅಂಗಡಿ ಹಾಗೂ ಉಡುಪಿ ಜಿಲ್ಲೆಯ ಶಬರೀಶ ಸುವರ್ಣ ಇವರುಗಳಿಗೆ ತಲಾ ರೂ. 25,000/- ಗಳನ್ನೊಳಗೊಂಡ ಪ್ರಶಸ್ತಿ ಪದಕದೊಂದಿಗೆ ಗೌರವಿಸಲಾಯಿತು.

ಅಸಲುಮ್ನಿ ಅಸೋಸಿಯೇಷನ್ ಕೃಷಿ ವಿಶ್ವವಿದ್ಯಾನಿಲಯದ ವತಿಯಿಂದ ಪ್ರತಿ ವರ್ಷ ನೀಡಲಾಗುವ ಪ್ರಶಸ್ತಿಗೆ ಕೃಷಿಕರನ್ನು ಆಯ್ಕೆ ಮಾಡಲು ನಾಲ್ಕು ವಿಭಾಗಗಳಲ್ಲಿ ಸಮಿತಿಗಳನ್ನು ರಚಿಸುವ ಮೂಲಕ ರಾಜ್ಯದ ನಾನಾ ಭಾಗಗಳಲ್ಲಿ ಸಮಗ್ರ ಕೃಷಿ ಪದ್ಧತಿ ಅನುಸರಿಸಿ, ವಿವಿಧ ಬೆಳೆಗಳನ್ನು ಬೆಳೆದು, ಅಲ್ಪ ನೀರು ಬಳಕೆ, ಯಂತ್ರೋಪಕರಣ ಬಳಕೆ, ಕಡಿಮೆ ವೆಚ್ಚ ಹೀಗೆ ಉತ್ತಮ ಪದ್ದತಿಗಳನ್ನು ಅನುಸರಿಸಿ ಹೈನುಗಾರಿಕೆ, ಪಶುಸಂಗೋಪನೆ, ಜೇನು ಸಾಕಾಣೆ, ವಿವಿಧ

ಬೆಳೆಗಳಾದ ಸಿರಿಧಾನ್ಯ, ತೆಂಗು, ಮಾವು, ಅಡಿಕೆ, ಮೆಣಸು, ತರಕಾರಿ ಹೀಗೆ ವರ್ಷ ಪೂರ್ತಿ ಆದಾಯ ಬರುವಂತಹಾ ಕಡಿಮೆ ಖರ್ಚಿನ ಬೆಳೆ ಬೆಳೆಯುವುದರ ಜೊತೆಗೆ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಒಟ್ಟು ಕುಟುಂಬದ ಸದಸ್ಯರೆಲ್ಲರೂ ದುಡಿಯುವುದು, ಇತರೆ ರೈತರಿಗೆ ಸಮಗ್ರ ಕೃಷಿ ಬಗ್ಗೆ ತಿಳುವಳಿಕೆ ಮೂಡಿಸುವುದು, ತರಬೇತಿ ಏರ್ಪಡಿಸುವುದು ಸೇರಿದಂತೆ ಕೃಷಿಯ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಸಾಧನೆ ಮಾಡಿದ ರಾಜ್ಯದ ನಾಲ್ವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಸಮಾರಂಭದ ಅಧ್ಯಕ್ಷತೆಯನ್ನು ಡಾ॥ ನಾರಾಣಗೌಡ, ಅಧ್ಯಕ್ಷರು, ಅಲುಮ್ನಿ ಅಸೋಸಿಯೇಷನ್, ಬೆಂಗಳೂರು ಅವರು ವಹಿಸಿದ್ದರು. ತುಮಕೂರು ಜಿಲ್ಲೆಯ ಲೋಕಸಭಾ ಸದಸ್ಯರಾದ ಎಸ್.ಪಿ. ಮುದ್ದಹನುಮೇಗೌಡ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಚಾಮರಾಜನಗರ ಲೋಕಸಭಾ ಸದಸ್ಯರಾದ ಆರ್. ಧ್ರುವನಾರಾಯಣ, ಡಾ॥ ಎಚ್. ಶಿವಣ್ಣ, ಕುಲಪತಿಗಳೂ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ಹೆಚ್. ಪಿ. ಮೋಹನ್, ಅಧ್ಯಕ್ಷರು ಮಲೆನಾಡು ಅಭಿವೃದ್ಧಿ ಮಂಡಳಿ, ಶಿವಮೊಗ್ಗ, ದತ್ತಿ ನಿಧಿ ಸ್ಥಾಪಕರಾದ ಡಾ॥ ಜಿ. ಕೆ. ವೀರೇಶ್ ಮತ್ತಿತರ ಹಿರಿಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**ಸಂಖ್ಯೆ:159/279**

## ಪಟಾಕಿ ಹಚ್ಚುವಾಗ ಮುಂಜಾಗರೂಕತೆ ವಹಿಸಲು ಸೂಚನೆ

ಬೆಂಗಳೂರು, ಅಕ್ಟೋಬರ್ 07 ( ಕರ್ನಾಟಕ ವಾರ್ತೆ) :

2017 ನೇ ಸಾಲಿನಲ್ಲಿ ದೀಪಾವಳಿ ಹಬ್ಬವನ್ನು ಸುರಕ್ಷಿತವಾಗಿ ಆಚರಿಸುವ ದಿಸೆಯಲ್ಲಿ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯು ಹಲವು ಕ್ರಮಗಳನ್ನು ಸೂಚಿಸಿದೆ.

ಮಕ್ಕಳಿಗೆ ದೊಡ್ಡವರ ಸಮ್ಮುಖದಲ್ಲೇ ಪಟಾಕಿ ಹಚ್ಚಲು ತಿಳಿಸತಕ್ಕದ್ದು. ತೆರೆದ ಪ್ರದೇಶದಲ್ಲಿ ಪಟಾಕಿ ಹಚ್ಚುವುದು ಸುರಕ್ಷಿತ. ಯಾವುದೇ ಸಂದರ್ಭದಲ್ಲಿ ಮನೆಯೊಳಗೆ ಪಟಾಕಿ ಹಚ್ಚಬಾರದು. ಆದಷ್ಟು ಮಟ್ಟಿಗೆ ಶರೀರಕ್ಕೆ ಹೊಂದಿಕೊಳ್ಳುವಂತಹ ಬಟ್ಟೆಗಳನ್ನು ಧರಿಸತಕ್ಕದ್ದು. ದೊಗಲೆ ಬಟ್ಟೆಗಳನ್ನು ಧರಿಸಬಾರದು. ಸುರ ಸುರ ಬತ್ತಿ ಇತ್ಯಾದಿಗಳನ್ನು ಶರೀರದಿಂದ ಆದಷ್ಟು ದೂರ ಹಿಡಿಯಬೇಕು. ಪಟಾಕಿ ಹಚ್ಚುವಾಗ ಅದರ ಮೇಲೆ ಬಾಗಬಾರದು. ಸಾಧ್ಯವಾದಷ್ಟು ಮಟ್ಟಿಗೆ ಪಕ್ಕದಿಂದ ಹಚ್ಚತಕ್ಕದ್ದು. ಯಾವುದೇ ಪಾತ್ರೆ ಒಳಗೆ ಅಥವಾ ಇಕ್ಕಟ್ಟಾದ ಸ್ಥಳಗಳಲ್ಲಿ ಪಟಾಕಿ ಹಚ್ಚಬಾರದು. ಪಟಾಕಿಗಳನ್ನು ಜೇಬಿನಲ್ಲಿಡಬಾರದು.

ಯಾವುದೇ ಸಂದರ್ಭದಲ್ಲಿ ಪಟಾಕಿಗಳನ್ನು ಬೆಂಕಿಯ ಅಥವಾ ಆ ಉಷ್ಣತೆ ಹೆಚ್ಚಿರುವ ಸ್ಥಳಗಳಲ್ಲಿ ಇಡಬಾರದು ಹಾಗೂ ಪೊಟ್ಟಣಗಳನ್ನು ತೆರೆಯಬಾರದು. ಹಚ್ಚಿರುವ ಪಟಾಕಿ ಸಿಡಿಯದಿದರೆ ಅದನ್ನು ಪುನರ್ ಪರೀಕ್ಷಿಸಲು ಪ್ರಯತ್ನಿಸಬಾರದು. ಹೂ ಕುಂಡಗಳನ್ನು ಕೈಯಲ್ಲಿ ಹಿಡಿದುಕೊಂಡು ಹಚ್ಚಬಾರದು. ರಾಕೆಟ್‌ಗಳನ್ನು ಬಳಸುವುದನ್ನು ಪೂರ್ಣವಾಗಿ ತಪ್ಪಿಸುವುದು ಉತ್ತಮ. ಬೇರೆಯವರಿಗೆ ತೋರಿಸಿಕೊಳ್ಳಲು ಪಟಾಕಿ ಹಚ್ಚುವಾಗ ಅಪಾಯಕ್ಕೆ ಅವಕಾಶ ಕೊಡಬಾರದು.

ಪಟಾಕಿ ಹಚ್ಚುವಾಗ ಯಾವಾಗಲೂ ಪಕ್ಕದಲ್ಲಿ ನೀರನ್ನು ಇಟ್ಟುಕೊಳ್ಳುವುದು ಸುರಕ್ಷಿತ ಆಕಸ್ಮಿಕವಾಗಿ ಸುಟ್ಟಗಾಯಗಳಾದರೆ ಕೂಡಲೇ ತಣ್ಣೀರನ್ನು ಸುರಿಯತಕ್ಕದ್ದು. ಸಾಧ್ಯವಾದಷ್ಟು ಮಟ್ಟಿಗೆ ಸ್ನೇಹಿತರ ಜೊತೆ ಸೇರಿ ಸಾರ್ವಜನಿಕ ತೆರೆದ ಪ್ರದೇಶಗಳಲ್ಲಿ ಪಟಾಕಿ ಹಚ್ಚುವುದು ಸೂಕ್ತ.

ಇದರಿಂದ ಎಲ್ಲರೂ ಸಂತೋಷಪಡಬಹುದು ಹಾಗೂ ಸುರಕ್ಷಿತ. ಪಟಾಕಿ ಹಚ್ಚುವಾಗ ಮಕ್ಕಳು, ವಯಸ್ಸಾದವರು, ಖಾಯಿಲೆ ಇರುವವರು ಹಾಗೂ ಪ್ರಾಣಿಗಳನ್ನು ಗಮನಿಸಿ ಅವರಿಗೆ ಆಗುವ ತೊಂದರೆಗಳನ್ನು ತಪ್ಪಿಸಲು ಪ್ರಯತ್ನಿಸಿ. ಸಾಧ್ಯವಾದಷ್ಟು ಮಟ್ಟಿಗೆ ಹೆಚ್ಚು ಶಬ್ದ ಬರುವ ಪಟಾಕಿಗಳನ್ನು ಆಸ್ಪತ್ರೆ ಮತ್ತು ಇತರೆ ಸೂಕ್ಷ್ಮ ಪ್ರದೇಶಗಳಲ್ಲಿ ಬಳಸುವುದನ್ನು ತಪ್ಪಿಸಿ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ:160/280**

## ಬ್ಲೂವೇಲ್ ಚಾಲೆಂಜ್ ಎಂಬ ಆನ್‌ಲೈನ್ ಗೇಮ್‌ನಿಂದ ವಿದ್ಯಾರ್ಥಿಗಳನ್ನು ದೂರವಿಡಲು ಸೂಕ್ತಕ್ರಮ

**ಬೆಂಗಳೂರು, ಅಕ್ಟೋಬರ್ 04 ( ಕರ್ನಾಟಕ ವಾರ್ತೆ) :**

ಅಂತರ್ಜಾಲ ತಾಣಗಳಲ್ಲಿ ಅನಾರೋಗ್ಯಕರ ಆನ್‌ಲೈನ್ ಆಟಗಳಿಂದ ದೂರವಿರುವಂತೆ ಮತ್ತು ವೆಬ್‌ಸೈಟ್‌ಗಳನ್ನು ಬಳಕೆ ಮಾಡದಂತೆ ಎಚ್ಚರವಹಿಸುವುದು ಇಲಾಖೆಯ, ಪೋಷಕರ, ಸಂಘ ಸಂಸ್ಥೆಗಳ ಮತ್ತು ಕಾಲೇಜಿನ ವ್ಯವಸ್ಥಾಪಕ ಮಂಡಳಿಗಳ ಆದ್ಯ ಕರ್ತವ್ಯವಾಗಿದೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ತಿಳಿಸಿದೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಇಲಾಖೆ "ಬ್ಲೂವೇಲ್ ಚಾಲೆಂಜ್" ಎಂಬ ಆನ್‌ಲೈನ್ ಗೇಮ್‌ನಿಂದ ಕಾಲೇಜು ಮಕ್ಕಳು ಪ್ರಚೋದನೆಗೊಂಡು ಅಂತಿಮವಾಗಿ ಆತ್ಮಹತ್ಯೆಗೆ ಈಡಾಗುತ್ತಿರುವ ಬಗ್ಗೆ ಹಲವು ದಿನಗಳಿಂದ ಎಲ್ಲಾ ದಿನ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದೆ ಹಾಗೂ

**ರಾಜ್ಯದ ಎಲ್ಲಾ ಸುದ್ದಿ ವಾಹಿನಿಗಳಲ್ಲಿ ಪ್ರಸಾರವಾಗುತ್ತಿದೆ. ಈ ಬಗ್ಗೆ ವರದಿಗಳನ್ನು ಪ್ರಕಟಿಸಿ/ಪ್ರಸಾರ ಮಾಡುವ ಮೂಲಕ ಸುದ್ದಿ ಮಾಧ್ಯಮಗಳು ಕಾಲೇಜು ಮಕ್ಕಳಲ್ಲಿ ಮತ್ತು ಪೋಷಕರಲ್ಲಿ ಅರಿವು ಮೂಡಿಸುತ್ತಿರುವುದು ಶ್ಲಾಘನೀಯವಾಗಿದೆ.**

**ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಉಪ ನಿರ್ದೇಶಕರು, ತಮ್ಮ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾಲೇಜುಗಳಲ್ಲಿ ವ್ಯಾಪಕ ಪ್ರಚಾರ ನೀಡಿ ಮಕ್ಕಳಿಗೆ ಅರಿವು ಮತ್ತು ಜಾಗ್ರತೆ ಮೂಡಿಸಲು ಹಾಗೂ ಅಂತರ್ಜಾಲ ತಾಣಗಳಲ್ಲಿ ಈ ರೀತಿ ಅನಾರೋಗ್ಯಕರ ಆಟಗಳಿಂದ ದೂರವಿರುವಂತೆ ಮತ್ತು ವೆಬ್‌ಸೈಟ್‌ಗಳನ್ನು ಬಳಕೆ ಮಾಡದಂತೆ ವಿದ್ಯಾರ್ಥಿಗಳಿಗೆ ತಿಳಿಸುವುದು ಶಿಕ್ಷಕರ ಹಾಗೂ ಪೋಷಕರ ಜವಾಬ್ದಾರಿಯಾಗಿದೆ.**

**ಮಕ್ಕಳ ನಡವಳಿಕೆ ಕುರಿತಂತೆ ಗಮನಹರಿಸಬೇಕಾದ ಅಂಶ:**

- ಮಗುವಿನ ಶರೀರದಲ್ಲಿ ಅಸಾಮಾನ್ಯ ಚಿಹ್ನೆಗಳು ಮತ್ತು ಗಾಯದ ಗುರುತುಗಳು ವಿಶೇಷವಾಗಿ ತೋಳು ಮತ್ತು ತುಟಿಗಳಲ್ಲಿ ಕಾಣಿಸಿಕೊಂಡಾಗ.
- ಮಗು ಬಹಳ ಸಮಯದವರೆಗೆ ಹೆದರುವ (ಹಾರರ್) ಚಲನಚಿತ್ರ ನೋಡುತ್ತಿರುವಾಗ
- ಮಗು ಅಸ್ವಾಭಾವಿಕ ಸಮಯದಲ್ಲಿ ಅಂದರೆ ಮುಂಜಾನೆ 4.20 ಕ್ಕೆ ಸರಿಯಾಗಿ ಏಳುತ್ತಿದ್ದರೆ.
- ಮಗು ವಿಚಿತ್ರವಾದ ಸಂಗೀತ ಕೇಳುತ್ತಿದ್ದಾರೆ.
- ಮಗು ಸಾಮಾಜಿಕ ಜಾಲತಾಣಗಳಲ್ಲಿ ಖಿನ್ನತೆಗೊಳಗಾದ ಸಂದೇಶ ಮತ್ತು ಸೆಲ್ಫಿಗಳನ್ನು ಪೋಸ್ಟ್ ಮಾಡುತ್ತಿದೆಯೇ, ಎಂಬ ಬಗ್ಗೆ ಪೋಷಕರು ಹಾಗೂ ಶಿಕ್ಷಕರು ಪ್ರತಿ ಮಕ್ಕಳ ಬಗ್ಗೆ ವಿಶೇಷ ಗಮನವನ್ನು ಹರಿಸುವುದು.

**ಉಪ ನಿರ್ದೇಶಕರು ಹಾಗೂ ಕಾಲೇಜಿನ ಪ್ರಾಂಶುಪಾಲರು ತೆಗೆದುಕೊಳ್ಳಬೇಕಾದ ಕ್ರಮ:**

- ಮಕ್ಕಳೊಂದಿಗೆ ಆತ್ಮೀಯ ವಾತಾವರಣ ಸೃಷ್ಟಿಸುವ ಮೂಲಕ ಬ್ಲೂವೇಲ್ ಚಾಲೆಂಜ್ ಆಟದ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವುದು.
- ಈ ಬಗ್ಗೆ ವ್ಯಾಪಕ ಪ್ರಚಾರವನ್ನು ಹಮ್ಮಿಕೊಳ್ಳುವುದು, ಮಕ್ಕಳಿಗೆ ಪ್ರತಿದಿನ ತಿಳುವಳಿಕೆ ನೀಡುವುದು.
- ಸೈಬರ್ ಕೆಫೆ ಮತ್ತು ಅಂತರ್ಜಾಲ ತಾಣಗಳಿಂದ ಈ ರೀತಿಯ ಅನಾರೋಗ್ಯಕರ ಚಟುವಟಿಕೆಗಳಿಂದ ದೂರವಿರುವಂತೆ ಮಕ್ಕಳಿಗೆ ತಿಳಿಸುವುದು.
- ಈ ಬಗ್ಗೆ ಪೋಷಕರುಗಳಲ್ಲಿಯೂ ಸಹ ಜಾಗೃತಿ ಮೂಡಿಸಲು ಆಂದೋಲನವನ್ನು ರೂಪಿಸಬೇಕು.
- ರಾಜ್ಯಾದ್ಯಂತ ಎಲ್ಲಾ ಉಪ ನಿರ್ದೇಶಕರು ತಮ್ಮ ವ್ಯಾಪ್ತಿಯಲ್ಲಿ ಬರುವ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕರಪತ್ರ, ಬ್ಯಾನರ್, ಪತ್ರಿಕಾ ಪ್ರಕಟಣೆ ಮುಖಾಂತರ ವ್ಯಾಪಕವಾದ ಪ್ರಚಾರವನ್ನು ಹಮ್ಮಿಕೊಳ್ಳುವುದು.

- ಸದರಿ ಮಾಹಿತಿಯನ್ನು ಸ್ಥಳೀಯ ಪೊಲೀಸ್ ಠಾಣೆಗಳಲ್ಲಿ ನೀಡಿ ಈ ಕಾರ್ಯಕ್ರಮಕ್ಕೆ ಸಹಕರಿಸುವುದು.
- ಬ್ರೌಸಿಂಗ್ ಸೆಂಟರ್‌ಗಳಲ್ಲಿ ಮಕ್ಕಳಿಗೆ ಬ್ಲೂವೇಲ್ ಚಾಲೆಂಜ್ ಆಟ ಆಡಲು ಅವಕಾಶ ಕಲ್ಪಿಸದಂತೆ ಸ್ಥಳೀಯ ಪೊಲೀಸ್ ಠಾಣೆಯ ಮೂಲಕ ಕ್ರಮ ಕೈಗೊಳ್ಳುವ ವ್ಯವಸ್ಥೆ ಮಾಡಿಸುವುದು.

ಈ ರೀತಿಯ ಅನಾರೋಗ್ಯಕರ ಅಂತರ್ಜಾಲ ತಾಣಗಳನ್ನು ನಿರ್ಬಂಧಿಸುವಲ್ಲಿ ಜಿಲ್ಲಾಡಳಿತದ ಸಹಕಾರ ಪಡೆದು, ಉಪ ನಿರ್ದೇಶಕರು ಹಾಗೂ ಕಾಲೇಜಿನ ಸಂಸ್ಥೆಯವರು, ಪ್ರಾಂಶುಪಾಲರು ಶಿಕ್ಷಕರುಗಳು "ಬ್ಲೂ ವೇಲ್ ಚಾಲೆಂಜ್" ಎಂಬ ಅನಾರೋಗ್ಯಕರ ಅಂತರ್ಜಾಲ ಆಟದಲ್ಲಿ ವಿದ್ಯಾರ್ಥಿಗಳು ಸಿಲುಕಿಕೊಳ್ಳದಂತೆ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳಲು ಕಟ್ಟುನಿಟ್ಟಿನ ಸೂಚನೆಯನ್ನು ನೀಡಿ ಪದವಿಪೂರ್ವ ಶಿಕ್ಷಣ ಇಲಾಖೆಯ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್

**ಸಂಖ್ಯೆ:161/281**

## 39 ಹಿಂದುಳಿದ ತಾಲ್ಲೂಕುಗಳಲ್ಲಿ ಮಾತೃ ಪುಷ್ಠಿವರ್ಧಿನಿ ಯೋಜನೆಗೆ ಚಾಲನೆ

ಬೆಂಗಳೂರು, ಅಕ್ಟೋಬರ್ 04 ( ಕರ್ನಾಟಕ ವಾರ್ತೆ) :

ಮಾತೃ ಪುಷ್ಠಿವರ್ಧಿನಿ ಯೋಜನೆಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆಯವರು ಪ್ರಧಾನವಾಗಿ ವಾಸಿಸುತ್ತಿರುವ 39 ಹಿಂದುಳಿದ ತಾಲ್ಲೂಕುಗಳಲ್ಲಿ ಗರ್ಭಿಣಿ ಮತ್ತು ಹಾಲುಣಿಸುವ ತಾಯಂದಿರಿಗೆ ಪ್ರತಿ ದಿನ 5 ಗ್ರಾಂ ಮೈಕ್ರೋ ನ್ಯೂಟ್ರಿಯೆಂಟ್ ಗ್ರಾನ್ಯೂಲ್ಸ್‌ಗಳನ್ನು ನೀಡುವ ಯೋಜನೆಯಾಗಿದ್ದು, ಈ ಯೋಜನೆಗೆ 10.00 ಕೋಟಿ ರೂ. ಹಣವನ್ನು ನಿಗದಿಪಡಿಸಲಾಗಿದೆ ಆರೋಗ್ಯ ಮತ್ತು ಕುಟುಂ ಕಲ್ಯಾಣ ಸಚಿವ ಕೆ.ಆರ್.ರಮೇಶ್ ಕುಮಾರ್ ಅವರು ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು ಮೊದಲನೇ ಸುತ್ತಿನ ಟೆಂಡರ್‌ನಲ್ಲಿ 4 ಬಿಡ್‌ಗಳನ್ನು ಸ್ವೀಕರಿಸಲಾಗಿದ್ದು, ಯಾರೊಬ್ಬರು ಟೆಂಡರ್ ಷರತ್ತುಗಳನ್ನು ಪೂರೈಸದೇ ಇರುವುದರಿಂದ ಈ ಎಲ್ಲಾ 4 ಬಿಡ್‌ಗಳನ್ನು ತಿರಸ್ಕರಿಸಲಾಗಿದೆ. ಎರಡನೇ ಸುತ್ತಿನ ಟೆಂಡರ್‌ನಲ್ಲಿ 4 ಬಿಡ್‌ಗಳನ್ನು ಸ್ವೀಕರಿಸಿದ್ದು, ಟೆಂಡರ್ ಷರತ್ತುಗಳನ್ನು ಪೂರೈಸದ ಎರಡು ಬಿಡ್‌ಗಳನ್ನು ತಿರಸ್ಕರಿಸಲಾಗಿದೆ.

ಯುನಿಸೆಫ್ ಷರತ್ತುಗಳ ಪ್ರಕಾರ ವಿಶೇಷ ಬಳಕೆಯ ಆಹಾರ ಧಾನ್ಯಗಳನ್ನು ಉತ್ಪಾದಿಸಲು ಸಂಬಂಧಿಸಿದ ಸಂಸ್ಥೆಯವರು ಎಫ್.ಎಸ್.ಎಸ್.ಎ.ಐ. **(F.S.S.A.I)** ನಿಂದ ಪರವಾನಿಗೆ ಪಡೆಯಬೇಕಾಗಿರುತ್ತದೆ.

ಮೆ: ಹೆಕ್ಸಗಾನ್ ಸಂಸ್ಥೆ ಇವರು ಈ ಪರವಾನಿಗೆಯನ್ನು ಸಲ್ಲಿಸಲು ವಿಫಲರಾಗಿರುವ ಕಾರಣ ಈ ಬಿಡ್‌ನ್ನು ತಿರಸ್ಕರಿಸಲಾಗಿದೆ. ಅಂತಿಮವಾಗಿ ತಾಂತ್ರಿಕ ಪರಿಶೀಲನೆಯಲ್ಲಿ ಮೆ: ಫಾರ್ಮಾವೇದ ಸಂಸ್ಥೆಯ ಬಿಡ್ಡರ್ ರವರು ಒಬ್ಬರೆ ಅರ್ಹರಾಗಿರುತ್ತಾರೆ. **2015-16** ರಲ್ಲಿ ಈ ಸಂಸ್ಥೆಯು ಮಹಾರಾಷ್ಟ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಇದೇ ಉತ್ಪನ್ನಗಳನ್ನು ರೂ **187.75** ಕ್ಕೆ ಸರಬರಾಜು ಮಾಡಿರುತ್ತಾರೆ. ಆ ವೇಳೆಯಲ್ಲಿ ಶೇ **5%** ರಷ್ಟು ವ್ಯಾಟ್ ದರ ಇರುತ್ತದೆ. ಈಗ ಪ್ರಸ್ತುತ **18%** ರಷ್ಟು ಜಿ.ಎಸ್.ಟಿ. ತೆರಿಗೆಯನ್ನು ಬಿಡ್ಡರ್ ರವರು ಪಾವತಿಸಬೇಕಾಗಿರುತ್ತದೆ.

ಇಲಾಖೆಯು ಸದರಿ ಉತ್ಪನ್ನಗಳನ್ನು ರೂ. **130/- +** ಜಿ.ಎಸ್.ಟಿ. ಸೇರಿ ಸುಮಾರು ರೂ. **153/-** ಗಳಿಗೆ ಸರಬರಾಜು ಮಾಡಲು ಮೆ: ಫಾರ್ಮಾವೇದ ಸಂಸ್ಥೆಯೊಂದಿಗೆ ಮಾತುಕತೆ ನಡೆಸಿದೆ.

ಇಲಾಖೆಯು ಸೂಚಿಸಿರುವ ರೂ **153/-** ಗಳನ್ನು ಬಿಡ್‌ದಾರ ಸಂಸ್ಥೆಯವರು ಇನ್ನೂ ಅಂತಿಮ ಒಪ್ಪಿಗೆ ಸೂಚಿಸದಿರುವ ಕಾರಣ ಈ ಗುತ್ತಿಗೆಯನ್ನು ಈ ತಹಲ್‌ವರೆಗೂ ನೀಡಿರುವುದಿಲ್ಲ. ಆದಕಾರಣ, ಅರೆಬರೆ ತಿಳುವಳಿಕೆಯಿಂದ ಮಿಥ್ಯಾರೋಪಮಾಡಿ ತೇಜೋವಧೆ ಮಾಡುವುದು ಸಂಸ್ಕಾರವಂತರ ಲಕ್ಷಣವಲ್ಲ ಎಂದು ಆರೋಗ್ಯ ಸಚಿವರು ತಿಳಿಸಿದ್ದಾರೆ.

ಎಸ್‌ಎಂ:ಜೆಡಿ:ಜಿಪಿಆರ್

**ಸಂಖ್ಯೆ:162/282**

## ಕಬ್ಬನ್‌ಪಾರ್ಕ್‌ನಲ್ಲಿ ಈ ಭಾನುವಾರ

**ಬೆಂಗಳೂರು, ಅಕ್ಟೋಬರ್ 07 ( ಕರ್ನಾಟಕ ವಾರ್ತೆ) :**

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು

ಹಮ್ಮಿಕೊಳ್ಳಲಾಗುತ್ತಿರುತ್ತದೆ. ದಿನಾಂಕ: 08-10-2017ರ **ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.**

1) **ಬೆಳಿಗ್ಗೆ 06.00 ಗಂಟೆಯಿಂದ ಬೆಳಿಗ್ಗೆ 07.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ** ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "ಉದ್ಯಾನವನದಲ್ಲಿ ಉದಯರಾಗ" **ಎಂಬ ಶೀರ್ಷಿಕೆಯಡಿ** ಶ್ರೀ.ಸಬ್ಬನಹಳ್ಳಿ ರಾಜು ಮತ್ತು ತಂಡ, ಬೆಂಗಳೂರು ಜಿಲ್ಲೆ ರವರಿಂದ ಜನಪದ ಗಾಯನ **ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**

2) **ಸಂಜೆ 05.00 ಗಂಟೆಯಿಂದ ಸಂಜೆ 06.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ** ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "ಉದ್ಯಾನವನದಲ್ಲಿ ಸಂಧ್ಯಾರಾಗ" **ಎಂಬ ಶೀರ್ಷಿಕೆಯಡಿ** ಶ್ರೀ. ಹೆಚ್.ಬಿ .ಪುಟ್ಟಬೋರಯ್ಯ ಮತ್ತು ತಂಡ, ತುಮಕೂರು ಜಿಲ್ಲೆ ರವರಿಂದ ಭಾವಗೀತೆ **ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**

3) **ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ** ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು **ಏರ್ಪಡಿಸಲಾಗಿದೆ.**

4) **ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ** ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ **ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.**

**ಈ ಭಾನುವಾರದ ವಿಶೇಷ ಕಾರ್ಯಕ್ರಮಗಳು:**

**I.ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ**

- ಬೆಳಿಗ್ಗೆ 7.00 ಗಂಟೆಯಿಂದ 8.00 ಗಂಟೆಯವರೆಗೆ **ಯೂನಿವರ್ಸ್ ಆರ್ಟ್ ಫೌಂಡೇಶನ್** ಸಂಸ್ಥೆಯ ಸಹಯೋಗದೊಂದಿಗೆ **ಮಂಜುಶ್ರೀ ಸಂತೋಷ್** ಮತ್ತು ತಂಡದವರಿಂದ **ಭರತನಾಟ್ಯಂ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
- ಬೆಳಿಗ್ಗೆ 8.00 ಗಂಟೆಯಿಂದ 9.00 ಗಂಟೆಯವರೆಗೆ **ಶ್ರೀವಾಣಿ ವಿದ್ಯಾ ಕೇಂದ್ರ** , ಮಾಚೋಹಳ್ಳಿ, ಬೆಂಗಳೂರು ಶಾಲಾ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ

**ಸಂಖ್ಯೆ:163/283**

# ಮುದ್ರಾ ಪ್ರೋತ್ಸಾಹ ಅಭಿಯಾನಕ್ಕೆ ಕೇಂದ್ರ ಸಚಿವ ಅನಂತ್‌ಕುಮಾರ್ ಚಾಲನೆ

**ಬೆಂಗಳೂರು, ಅಕ್ಟೋಬರ್ 07 ( ಕರ್ನಾಟಕ ವಾರ್ತೆ) :**

ಮುದ್ರಾ ಯೋಜನೆಯಡಿ ದೇಶದ ಸಣ್ಣ ಮತ್ತು ಅತಿ ಸಣ್ಣ ಉದ್ದಿಮೆ ಹಾಗೂ ಉದ್ದಿಮೆದಾರರಿಗೆ 10 ಲಕ್ಷದವರೆಗೆ ಹಣಕಾಸು ನೆರವು ಸಿಗಲಿದೆ ಎಂದು ಕೇಂದ್ರ ರಾಸಾಯನಿಕ ಹಾಗೂ ರಸಗೊಬ್ಬರ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಅನಂತ್‌ಕುಮಾರ್ ತಿಳಿಸಿದರು.

ಅವರು ಇಂದು ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಕೇಂದ್ರದ ಹಣಕಾಸು ಸೇವೆಗಳ ಇಲಾಖೆ, ಹಣಕಾಸು ಸಚಿವಾಲಯ, ರಾಜ್ಯ ಸರ್ಕಾರ ಹಾಗೂ ರಾಜ್ಯಮಟ್ಟದ ಬ್ಯಾಂಕರುಗಳ ಸಮಿತಿ ಸಹಯೋಗದಲ್ಲಿ ಹಮ್ಮಿಕೊಳ್ಳಲಾದ ಮುದ್ರಾ ಪ್ರೋತ್ಸಾಹ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.

ಭಾರತದಲ್ಲಿ ಈ ಯೋಜನೆಯಿಂದ ಕೋಟ್ಯಾಂತರ ಜನರಿಗೆ ಸಾಲ ದೊರೆತಿದೆ. ಇದರಿಂದ ಅವರು ಸ್ವಾವಲಂಭಿಗಳಾಗಿ ಉದ್ಯೋಗಾವಕಾಶ ಸಹ ಹೆಚ್ಚಿದೆ. ಇದರಿಂದ ದೇಶಕ್ಕೆ ಆರ್ಥಿಕ ಧೃಢತೆ ಹೆಚ್ಚಾಗುತ್ತದೆ ಎಂದರು.

ಕೇಂದ್ರ ಸರ್ಕಾರ ಅಪಘಾತ ಮರಣಕ್ಕಾಗಿ ಪ್ರಧಾನಮಂತ್ರಿ ಸುರಕ್ಷಾ ಭೀಮಾ ಯೋಜನೆ, ಜೀವವಿಮೆಗಾಗಿ ಪ್ರಧಾನಮಂತ್ರಿ ಜ್ಯೋತಿ ಭೀಮಾ ಯೋಜನೆ, ಅಟಲ್ ಮಾಸಾಶನ ಯೋಜನೆ, ಪ್ರಧಾನಮಂತ್ರಿ ಮುದ್ರಾಯೋಜನೆ (ಸಾಲ ಯೋಜನೆ) ಸ್ಟಾಂಡ್ ಆಫ್ ಇಂಡಿಯಾ (ಎಸ್‌ಸಿಎಸ್‌ಟಿ ಹಾಗೂ ಮಹಿಳೆಗೆ ಸಾಲ ಯೋಜನೆ) ಯನ್ನು ಜಾರಿಗೆ ತಂದಿದ್ದು, ಕೋಟ್ಯಾಂತರ ಜನ ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಮುದ್ರಾ ಯೋಜನೆ ಅನುಷ್ಠಾನದಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ ಎಂದರು.

ಫಲಾನುಭವಿಗಳಿಗೆ ಸಚಿವರು ಮುದ್ರಾ ಸಾಲಪತ್ರ ವಿತರಿಸಿದರು. ಅಲ್ಲದೆ ಭೀಮಾ ಆಪ್ ನ್ನು ಉದ್ಘಾಟಿಸಿದರು. ಈ ಅಭಿಯಾನದಲ್ಲಿ ಹಲವು ಹಣಕಾಸು ಸಂಸ್ಥೆಗಳು, ಬ್ಯಾಂಕುಗಳು, ಇನ್ಸೂರೆನ್ಸ್ ಕಂಪನಿಗಳು ತಮ್ಮ ಮಳಿಗೆ ತೆರೆಯುವುದರ ಮೂಲಕ ಭಾಗವಹಿಸಿದ್ದವು. ದೇಶಾದ್ಯಂತ 50 ಸ್ಥಳಗಳಲ್ಲಿ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ಹುಬ್ಬಳ್ಳಿ ಹಾಗೂ ಮಂಗಳೂರಿನಲ್ಲಿ ಸಹ ಮುಂದೆ ಈ ಅಭಿಯಾನ ನಡೆಯಲಿದೆ.

ಕಾರ್ಯಕ್ರಮದಲ್ಲಿ ಸಂಸದ ಪಿ.ಸಿ. ಮೋಹನ್, ಶಾಸಕ ಅಶ್ವಥ್‌ನಾರಾಯಣ, ಸರ್ಕಾರದ ಹೆಚ್ಚುವರಿ ಪ್ರಧಾನ ಕಾರ್ಯದರ್ಶಿಗಳಾದ ವಿಜಯಭಾಸ್ಕರ್, ಕೇಂದ್ರ ಹಣಕಾಸು ಸಚಿವಾಲಯದ ಅಧಿಕಾರಿ ಮುದ್ದಿತಾ ಮಿಶ್ರಾ, ಸಿಂಡಿಕೆಟ್ ಬ್ಯಾಂಕ್‌ನ ಎಕ್ಸ್‌ಕ್ಯೂಟಿವ್ ಮ್ಯಾನೇಜರ್ ಮಲ್ಲಿಕಾರ್ಜುನ ರಾವ್ ಉಪಸ್ಥಿತರಿದ್ದರು.

**ಸಂಖ್ಯೆ:164/284**

## ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟ

**ಬೆಂಗಳೂರು, ಅಕ್ಟೋಬರ್ 07 ( ಕರ್ನಾಟಕ ವಾರ್ತೆ) :**

ಕರ್ನಾಟಕ ಲೋಕಸೇವಾ ಆಯೋಗವು ಕರ್ನಾಟಕ ರಾಜ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಲ್ಲಿನ ಸಮೂಹ 'ಎ' ವೃಂದದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಒಟ್ಟು ಹುದ್ದೆಗಳ ನೇಮಕಾತಿಗೆ ಸಂಬಂಧಿಸದಿಂತೆ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಆಯೋಗದ ವೆಬ್‌ಸೈಟ್ http://kpsc.kar.nic.in/lists ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಆಕ್ಷೇಪಣೆಗಳಿದ್ದಲ್ಲಿ 07 ದಿನಗಳೊಳಗಾಗಿ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗಸೌಧ, ಬೆಂಗಳೂರು ಇವರಿಗೆ ಸಲ್ಲಿಸಬಹುದು. ಕೊನೆಯ ದಿನಾಂಕದ ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಆಯೋಗದ ಪ್ರಕಟಣೆ ತಿಳಿಸಿದೆ.